ಅಧ್ಯಕ್ಷರು.—ಹಾಗಿದ್ದರೆ ಇದನ್ನು ಕೈಗಾರಿಕಾ ಮಂತ್ರಿಗಳಿಗೆ ವರ್ಗಾವಣೆ ಮಾಡೋಣ.

ಅಧ್ಯಕ್ಷರು.—ಕುಶಾಲ. ಗೈರು ಹಾಜರಿ

ಮಂಗಳೂರಿನಲ್ಲಿ ಜನ ವಾಸಿಸುತ್ತಿರುವ ಜಾಗದಲ್ಲಿ ಕೊಳಚೆ ಸಾಮಗ್ರಿಗಳನ್ನು ಹಾಕಂತ್ತಿರುವ ಬಗ್ಗೆ

೪. ಶ್ರೀ ರಾಮಾನಾಥ್ ರೈ (ಬಂಟ್ವಾಳ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಮಂಗಳೂರು ಮಹಾನಗರಪಾಲಿಕೆಯು ಜನ ವಾಸಿಸುತ್ತಿರುವ ಜಾಗದಲ್ಲಿ ಕೊಳಚೆ ಸಾಮಗ್ರಿಗಳನ್ನು ಹಾಕಂತ್ತಿರುವ ಬಗ್ಗೆ ಜನ ವಿರೋಧ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

೨) ಹಾಗಿದ್ದಲ್ಲಿ ಶಾಶ್ವತ ಬದಲಿ ವ್ಯವಸ್ಥೆ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಹೌದು

೨ ಕಸಕಡ್ಡಿಗಳನ್ನು ಸಾಗಿಸುವುದಕ್ಕೆ ಬೇರೆ ಸ್ಥಳಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ನಗರಪಾಲಿಕೆಯು ಈಗಾಗಲೇ ನೆಲಮಟ್ಟವನ್ನು ಸಮತಟ್ಟಾಗಿ ಮಾಡಿ ಕಸಕಡ್ಡಿಗಳನ್ನು ಚೆಲ್ಲುವುದಕ್ಕೆ ರೂ. ೬೦,೦೦೦ಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ರಮಾನಾಥ ರೈ.—ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರಪಾಲಿಕೆಯ ಪರಿಮಿತಿಯೊಳಗೆ ವಾಮಂಜೂರು ಎನ್ನುವ ಸ್ಥಳ ಇದೆ. ಇದು ಜನ ವಾಸ ಮಾಡುವ ಸ್ಥಳವಾಗಿದೆ. ಇಲ್ಲಿ ಮಹಾನಗರ ಪಾಲಿಕೆಯವರು ಸತ್ತ ಪ್ರಾಣಿಗಳನ್ನು ಇನ್ನಿತರೆ ಕೊಳಚೆ ವಸ್ತುಗಳನ್ನು ರಸ್ತೆಯ ಪಕ್ಕದಲ್ಲಿಯೇ ಡಂಪ್ ಮಾಡುತ್ತಿದ್ದಾರೆ ಈ ಜಾಗದಲ್ಲಿ ಸುಮಾರಾಗಿ ಪ್ರಾಥಮಶಾಲೆ, ಪ್ರಾಥಮಿಕ ಶಾಲೆ, ಕೃಷಿ ಶಾಲೆ, ಚರ್ಚ್, ಒಂದು ಅಂಗಪಿಕಲರ ಶಾಲೆ ಇದೆ. ಇಲ್ಲಿ ವಾಸಮಾಡುತಕ್ಕ ಜನ ಇದರಿಂದಾಗಿ ಬಹಳಷ್ಟು ಸಾರಿ ರೊಚ್ಚಿಗೆದ್ದು ಗಲಾಟೆ ಕೂಡ ಮಾಡಿದ್ದಾರೆ ಅಂತಹ ಸಂದರ್ಭದಲ್ಲಿ ಪೋಲೀಸರ ಪ್ರವೇಶ ಕೂಡ ಆಗಿದೆ ಆದ್ದರಿಂದ ಈ ಕಸಕಡಿ ಮತ್ತು ಸತ್ತಪ್ರಾಣಿಗಳನ್ನು ಹಾಕತಕ್ಕ ಭಾಗವನ್ನು ಕೂಡಲೇ ಬದಲಾಯಿಸಬೇಕಂ. ಜನರ ಆರೋಗ್ಯವನ್ನು ಕೆಡಿಸಿ, ಜನರನ್ನು ರೋಗಗ್ರಸ್ತರನ್ನಾಗಿ ಮಾಡುವಂಥ ಈ ಒಂದು ಕೆಲಸವನ್ನು ಕೂಡಲೇ ನಿಲ್ಲಿಸಬೇಕು. ಕಸಕಡಿ ಮತ್ತಿತರ ವಸ್ತುಗಳನ್ನು ಸಮುದ್ರಕ್ಕಾದರೂ ಹಾಕಲಿ ಅಥವಾ ಬೆಂಕಿಯಲ್ಲಿ ಹಾಕಿ ನಾಶ ಮಾಡತಕ್ಕ ಒಂದು ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಸನ್ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ನಾಗರೀಕರ ಒಂದು ನೈರ್ಮಲ್ಯ ಮತ್ತು ಅವರ ಆರೋಗ್ಯದ ದೃಷ್ಟಿಯಿಂದ ಏನು ಒಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ ಹಾಗೂ ಸರ್ಕಾರದ ಗಮನವನ್ನು ಸೆಳೆದಿದ್ದಾರೆ, ಬಹುಶಃ ಅದು ಪುರಸಭೆಯಾಗಿರಬಹುದು ನಗರ ಸಭೆಯಾಗಿರಬಹುದು ಅಥವಾ ನಗರ ಮಹಾಪಾಲಿಕೆ ಇರಬಹುದು ಈ ನಗರಗಳ ಚೌಕಟ್ಟಿನಲ್ಲಿ ನೈರ್ಮಲ್ಯವನ್ನು ಕಾಪಾಡತಕ್ಕದ್ದು ಅತ್ಯಗತ್ಯ ಎಂಬ ಸುತ್ತೋಲೆಯನ್ನು ಈಗಾಗಲೇ ಎಲ್ಲರಿಗೂ ಕಳುಹಿಸಿಕೊಟ್ಟಿದ್ದೇವೆ ಬಹುಶಃ ಮಾನ್ಯ ಸದಸ್ಯರು ಈಗ ಏನು ಪ್ರಸ್ತಾಪ ಮಾಡಿದ್ದಾರೆ ಅದು ನನಗೆ ತಿಳಿದುಬಂದಿದೆ. ನಾನು ಅಧಿವೇಶನ ಮುಗಿವ ತಕ್ಷಣವೇ ನಾನು ಮಂಗಳೂರು ನಗರಕ್ಕೆ ಭೇಟಿ ಕೊಡಲಿದ್ದೇನೆ ಆ ಸಮಯದಲ್ಲಿ ನಾನು ಅದರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿ ಸ್ಥಳವನ್ನು ಅಜಮಾಯಿಸಿ ನೋಡಿ ಸೂಕ್ತ ಸ್ಥಳದಲ್ಲಿಇಂತಹ ಕಸಕಡ್ಡಿಗಳನ್ನು,ಹಾಕಲಿಕ್ಕೆ ಒಂದು ವ್ಯವಸ್ಥೆ ಮಾಡುತ್ತೇನೆ ಎನ್ನುವ ಕಟ್ಟುನಿಟ್ಟಿನ ಭರವಸೆಯನ್ನು ಕಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇನೆ.

ಕನ್ನಡ ವೃತ್ತಿ ರಂಗ ಭೂಮಿಗೆ ಸಹಾಯ ಧನ

೨೮೪. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಶಿಕ್ಷಣ, ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

೮) ಕರ್ನಾಟಕದಲ್ಲಿ ಅತ್ಯಂತ ವೈಭವವಾಗಿ ಮೆರೆದ ಕನ್ನಡ ವೃತ್ತಿ ರಂಗಭೂಮಿ ಇಂದಿಂ ಅವಸಾನದ ಅಂಚಿನಲ್ಲಿರುವುದು ಸರ್ಕಾರದ ಆಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅದನ್ನು ತಪ್ಪಿಸಲು ನಾಟಕ ಕಂಪನಿಗಳಿಗೂ ಸಹಾಯಧನ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ವಾಟಾಳ್ ನಾಗರಾಜ್. —ನನ್ನ ಒಂದನೆಯ ಪ್ರಶ್ನೆಯಲ್ಲಿ ಕರ್ನಾಟಕದ ಅತ್ಯಂತ ವೈಭವವಾಗಿ ಮೆರೆದ ಕನ್ನಡ ವೃತ್ತಿ ರಂಗಭೂಮಿ ಇಂದು ಅವಸಾನದ ಅಂಚಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಉತ್ತರದಲ್ಲಿ ತಾವು ಇಲ್ಲ ಎಂದು ಹೇಳಿದ್ದೀರಿ. ಆದರೆ ಉತ್ತರದ ಪ್ರಕಾರ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಆಯಿತು. ಈಗ ಎಷ್ಟು ರಂಗಭೂಮಿಗಳು ಈ ಕರ್ನಾಟಕದಲ್ಲಿ ಈಗ ವೈಭವವಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಶ್ರೀ ಕೆ. ಹೆಚ್. ರಂಗನಾಥ್ —ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೇನೆ. ನನ್ನ ಗಮನಕ್ಕೆ ವೈಯಕ್ತಿಕವಾಗಿ ಬಂದಿದೆ, ನನಗೆ ಗೊತ್ತು, ಕರ್ನಾಟಕದಲ್ಲಿ ರಂಗಭೂಮಿ ಅದು ನಶಿಸಿ ಹೋಗಿದೆ. ಇವೊತ್ತು ನಾವು ಹೇಳತಕ್ಕಂಥ ರಂಗಭೂಮಿಗಳು ಯಾವುದೂ ಇಲ್ಲ. ಅದು ಉತ್ತರ ಕನ್ನಡ ಭಾಗದಲ್ಲಿ ಆಗಬಹುದು. ಅಥವಾ ಹಳೆಯ ಮೈಸೂರು ಭಾಗದಲ್ಲಿ ಆಗಬಹುದು, ಇವೊತ್ತು ಅದು ಇಲ್ಲ. ಆದ್ದರಿಂದ, ಸ್ವಲ್ಪ ಇದು ಸರ್ಕಾರದ ಉತ್ತರವಾಗಿದ್ದರಿಂದ ನಾನೂ ಅದನ್ನು ಕೊಟ್ಟಿದ್ದೇನೆ. ನಾನು ಅದನ್ನು ಒಪ್ಪುವಾಗಲೂ ಕೂಡ ನನ್ನ ಅಭಿಪ್ರಾಯ ಮನಸ್ಸಿನಲ್ಲಿ ಇತ್ತು, ಆದರೂ ಕೂಡ ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸಿಲ್ಲ ಎಂದು ಯಾರೂ ತಿಳಿದುಕೊಳ್ಳಕೂಡದು. ೧೯೭೮ರ ಸುಮಾರಿಗೆ ಗುಬ್ಬಿ ಚನ್ನಬಸವೇಶ್ವರ ಸ್ವಾಮಿ, ಇವರಿಗೆ ಒಂದು ಲಕ್ಷ ರೂಪಾಯಿನಷ್ಟು ಸಹಾಯಧನವನ್ನು ಸರ್ಕಾರ ಪ್ರೋತ್ಸಾಹ ರೂಪದಲ್ಲಿ ಕೊಟ್ಟಿದೆ. ೧೯೮೦ನೇ ಇಸವಿಯಲ್ಲಿ ಶ್ರೀ ವೀರೇಶ್ವರ ನಾಟಕ ಸಂಘ, ಗದಗ ಇವರಿಗೆ ೫೦ ಸಾವಿರ ಸಹಾಯ ಮಾಡಲಾಗಿದೆ. ಕೆ. ಬಿ. ಆರ್. ಡ್ರಾಮಾ ಕಂಪನಿ, ದಾವಣಗೆರೆ ಇವರಿಗೆ ೫೦ ಸಾವಿರ ರೂಪಾಯಿ ಸಹಾಯ ಮಾಡಿದ್ದೇವೆ ಮತ್ತೆ ಶ್ರೀ ಶಾರದ ಸಂಗೀತ ನಾಟಕ ಮಂಡಳಿ, ಗೋಕಾಕ್ ಬೆಳಗಾಂ ಇವರಿಗೆ ೫೦ ಸಾವಿರ ರೂಪಾಯಿ ಸಹಾಯ ಮಾಡಿದ್ದೇವೆ. ಕಲಾ ವೈಭವ ನಾಟಕ ಸಂಘ ಬೆಳಗಾಂ ಇವರಿಗೆ ೫೦ ಸಾವಿರ ರೂಪಾಯಿ ಸಹಾಯ ಮಾಡಿದ್ದೇವೆ. ೧೯೮೫ರಲ್ಲಿ ಗುಬ್ಬಿ, ಚನ್ನಬಸವೇಶ್ವರ ಶತಮಾನೋತ್ಸವ ಆಚರಣೆಗೆ ಸರ್ಕಾರ ಒಂದು ಲಕ್ಷ ರೂಪಾಯಿ ಸಹಾಯ ಮಾಡಿದೆ. ತದನಂತರ ೧೯೮೯ರಲ್ಲಿ ಈ ನಾಟಕೋತ್ಸವ ಮಾಡಬೇಕೆಂದು ಹೇಳಿ, ಮಂಜೂರು ನಾಟಕ ಕಂಪನಿಗಳಿಗೆ ಒಂದು ಸಿದ್ಧಿವಿನಾಯಕ ನಾಟಕ ಸಂಘ, ಧಾರವಾಡ, ಇವರಿಗೆ ೫ ಸಾವಿರ ರೂಪಾಯಿ ರಸಾದನ, ಬೆಂಗಳೂರು ಇವರ ನಾಟಕೋತ್ಸವ ಇವರಿಗೆ ೮ ಸಾವಿರ ರೂಪಾಯಿ, ರಸಾದನ, ಬೆಂಗಳೂರು ಇವರ ವೃತ್ತಿ ನಾಟಕೋತ್ಸವ ಇದಕ್ಕೆ ೧೦ ಸಾವಿರ ರೂಪಾಯಿ ಹೀಗೆ ಸರ್ಕಾರ ಪ್ರೋತ್ಸಾಹ ಮಾಡುತ್ತಿದೆ. ಮತ್ತೆ ಬಡ್ಜೆಟ್‌ನಲ್ಲಿಯೂ ಕೂಡ ಸಂಘ ಸಂಸ್ಥೆಗಳಿಗೆ ಎಂದು ಹೇಳಿ, ಹಣ ಒದಗಿಸತಕ್ಕಂಥ ಪದ್ಧತಿಯನ್ನು ಸರ್ಕಾರ ಇಟ್ಟುಕೊಂಡು ಬಂದಿದೆ. ಆದರೆ ೧೯೮೭ ರಿಂದ ಬಡ್ಜೆಟ್‌ನಲ್ಲಿ ಇದನ್ನು ನಿಲ್ಲಿಸಿದೆ, ಹಣ ಇಟ್ಟಿಲ್ಲ. ಅಂದರೆ ಇದರ ಬಗ್ಗೆ ಸರ್ಕಾರ ಗಮನಹರಿಸಿಲ್ಲ ಎಂದು ಕರ್ನಾಟಕದ ಜನರು ಯಾರೂ ತಪ್ಪು ತಿಳಿದುಕೊಳ್ಳಕೂಡದು. ನಮಗೆ ಗೊತ್ತಿದ್ದ ಹಾಗೆ ಈಗ ಸಿನಿಮಾ ಹಾವಳಿ, ಮತ್ತೆ ವಿಡಿಯೋ ಕ್ಯಾಸೆಟ್‌ಗಳು ಬಂದಮೇಲೆ ನಾಟಕಕ್ಕೆ ಹೋಗಿ ನೋಡತಕ್ಕವರು ಕಡಿಮೆಯಾಗಿರಬಹುದೆಂದು ನನ್ನ ಭಾವನೆ. ಮತ್ತೆ ವೃತ್ತಿ ನಾಟಕ ಕಲಾವಿದರು ಕೂಡ ಕಡಿಮೆಯಾಗಿದ್ದಾರೆ. ಆದರಲ್ಲೂ ಕೂಡ ವೃದ್ಧಾಪ್ಯದಲ್ಲಿ ಅವರ ಪರಿಸ್ಥಿತಿ ಬಹಳ ತೊಂದರೆಗೊಳಗಾಗುವುದರಿಂದ ಇದರ ಬಗ್ಗೆ ಬಿಟ್ಟು ಸಿನಿಮಾರಂಗಕ್ಕೆ ಹೆಚ್ಚು ಪ್ರವೇಶ ಮಾಡುತ್ತಿದ್ದಾರೆ ಈ ಒಂದು ಕ್ಷೇತ್ರ ಮೊದಲು ಏನು ಗಣನೀಯ ಪ್ರಮಾಣದಲ್ಲಿತ್ತು ಅಂತಹ ಪರಿಸ್ಥಿತಿಯನ್ನು ಇವೊತ್ತು ನಾವು ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈಗ ಹಿಂದೆ ತಾವು ಕೆ. ಬಿ. ಆರ್. ನಾಟಕ ಕಂಪನಿಗೆ ೫೦ ಸಾವಿರ ರೂಪಾಯಿ ಕೊಟ್ಟಿವಿ ಎಂದು ಹೇಳಿದಿರಿ. ಈಗ ನಾನು ತಮ್ಮಲ್ಲಿ ಒಂದು ಪ್ರಶ್ನೆ ಕೇಳಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಅವಸಾನದ ಅಂಚಿನಲ್ಲಿರತಕ್ಕ ಈ ರಂಗಮಂದಿರಗಳನ್ನು ಉಳಿಸುವುದಕ್ಕೆ ಹೇಳಬೇಕಾಗಿದೆ. ಇವೊತ್ತು ತಾವು ನಮ್ಮಲ್ಲಿಯೇ ತಯಾರಾಗತಕ್ಕ ಉತ್ತಮ ಚಲನಚಿತ್ರಗಳಿಗೆ ಮೂರೂವರೆ ಲಕ್ಷ ರೂಪಾಯಿ ಸಬ್ಸಿಡಿ ಕೊಡುತ್ತಿದ್ದೀರಿ. ನಾನು ತಮಗೆ ಒಂದು ಸಲಹೆ ಮಾಡುತ್ತಿದ್ದೇನೆ. ಇವೊತ್ತು ಸಂಪೂರ್ಣವಾಗಿ ವೃತ್ತಿ ರಂಗ ಭೂಮಿ ನಾಶವಾಗಿದೆ. ಇದು ಸ್ಪಷ್ಟವಾದಂತಹ ಅಭಿಪ್ರಾಯ.

ಇದು ತಪ್ಪಿಗೂ ಗೊತ್ತಿದೆ ನಿಜಕ್ಕೂ ಗೊತ್ತಿದೆ. ಗುಬ್ಬಿ ಕಂಪೆನಿ ಇವತ್ತು ಅವಸಾನದ ಅಂಚಿನಲ್ಲಿದೆ. ವರದರಾಜಾಚಾರ್ ಕಂಪೆನಿ ಮುಗಿಯಿತು. ಕೆ. ವಿ. ಆರ್. ಕಂಪೆನಿ ಇವತ್ತು ಇಲ್ಲ. ಬೀರ್ ಕಂಪೆನಿ ಇಲ್ಲ. ಉತ್ತರ ಕರ್ನಾಟಕದ ಗುಡಿಗೇರಿ ಕಂಪೆನಿ ಮಾತ್ರ ಇದೆ. ಸುಮಾರು ೨೫ ವರ್ಷಗಳ ಹಿಂದೆ ಮಾನ್ಯ ಅಧ್ಯಕ್ಷರೇ ತಾವು ವಿದೇಶದಿಂದ ಬಂದಂತಹ ಸಂದರ್ಭದಲ್ಲಿ ಗಾಂಧೀನಗರದ ಹತ್ತಿರ ಗುಬ್ಬಿ ಕಂಪೆನಿಗೆ ಬಂದಿದ್ದಿರಿ ಆಗ ಎಷ್ಟು ವೈಭವವಾಗಿ ರಂಗಮಂದಿರ ಮೆರೆದಿತ್ತು ಎಂಬುದನ್ನು ತಾವು ಮನಃಚಿರಲಾರಿರಿ. ಆದರೆ ಇವತ್ತು ಅದು ನಾಶವಾಗಿದೆ. ಈ ಅವಸಾನದ ಅಂಚಿನಲ್ಲಿರುವ ಕಂಪೆನಿಗಳನ್ನು ಮೇಲಕ್ಕೆ ಎತ್ತಲು ಸರಕಾರ ಒಂದು ಹೊಸ ಯೋಜನೆಯನ್ನು ಮಾಡಿ ಆ ಮೂಲಕ ಈ ಕಂಪೆನಿಗಳಿಗೆ ಕನಿಷ್ಠ ಪ್ರತಿ ವರ್ಷಕ್ಕೆ ಇಷ್ಟು ಎಂದು ಹಣವನ್ನು ನೀಡಿದರೆ ಅನುಕೂಲವಾಗುತ್ತದೆ. ಹೊಸ ಹೊಸ ನಾಟಕಗಳಿಗೆ ಆಲ್ಲದಿದ್ದರೂ ಕೂಡ ವರ್ಷಕ್ಕೆ ಒಂದುಸಲ ಸಹಾಯಧನವನ್ನು ಕೊಡ ತಕ್ಕಂತಹ ಪರಿಪಾಠವನ್ನು ಒಂದು ಹೊಸ ಯೋಜನೆಯ ರೂಪದಲ್ಲಿ ಮಾಡುವುದಕ್ಕೆ ಸಿದ್ಧರಿದ್ದೀರಾ ಎಂದು ತಮ್ಮಲ್ಲಿ ಕೇಳ ಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡೋಣ.

ರಾಜ್ಯದಲ್ಲಿ ವಯಸ್ಕರ ಶಿಕ್ಷಣ

೧೧೪. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ''ವಯಸ್ಕರ ಶಿಕ್ಷಣ'' ಕ್ಕಾಗಿ ಖರ್ಚು ಮಾಡುತ್ತಿರುವ ಹೊತ್ತವೆಷ್ಟು ?

ಆ) ಮೇಲ್ಕಂಡ ''ವಯಸ್ಕರ ಶಿಕ್ಷಣ ಕ್ಕಾಗಿ'' ಕೇಂದ್ರ ಸರ್ಕಾರದಿಂದ ಪಡೆಯುತ್ತಿರುವ ಅನುದಾನದ ಹೊತ್ತವೆಷ್ಟು ?

ಇ) ''ವಯಸ್ಕರ ಶಿಕ್ಷಣ'' ಇಲಾಖೆಯು ಸಿಬ್ಬಂದಿ ವರ್ಗ ಹಾಗೂ ಆಡಳಿತ ನಿರ್ವಹಣೆಗಾಗಿ ಖರ್ಚು ಮಾಡುತ್ತಿರುವ ವಾರ್ಷಿಕ ಹೊತ್ತವೆಷ್ಟು ?

ಈ) ವಯಸ್ಕರ ಶಿಕ್ಷಣದಿಂದ ಯಾವ ಪ್ರಯೋಜನವೂ ಇಲ್ಲದಿರುವುದರಿಂದ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ವಯಸ್ಕರ ಶಿಕ್ಷಣವನ್ನು ರದ್ದುಗೊಳಿಸಿ ಅದಕ್ಕೆ ಖರ್ಚಾಗುವ ಹಣವನ್ನು ಪ್ರಾಥಮಿಕ ಶಿಕ್ಷಣಕ್ಕೆ ಉಪಯೋಗಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಕೆ ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ವಯಸ್ಕರ ಶಿಕ್ಷಣಕ್ಕಾಗಿ ೧೯೮೮-೮೯ನೇ ಸಾಲಿನಿಂದ ೧೯೮೯-೯೦ನೇ ಸಾಲಿನವರೆಗೆ ಮಂಜೂರು ಮಾಡಿದ ಹೊತ್ತದ ವಿವರಗಳು ಕೆಳಕಂಡಂತಿವೆ.

೧೯೮೮-೮೯	ರೂ. ೪೯೦.೨೪ ಲಕ್ಷಗಳು
೧೯೮೯-೯೦	ರೂ. ೫೦೮.೪೨ ಲಕ್ಷಗಳು

ಆ) ೧೯೮೮-೮೯ ಮತ್ತು ೧೯೮೯-೯೦ನೇ ಸಾಲಿಂಗಳಲ್ಲಿ ವಯಸ್ಕರ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದಿಂದ ಪಡೆಯಲಾದ ಅನುದಾನದ ಹೊತ್ತಗಳು ಕೆಳಕಂಡಂತಿವೆ.

೧೯೮೮-೮೯	ರೂ. ೫೫.೫೬ ಲಕ್ಷಗಳಂ
೧೯೮೯-೯೦	ರೂ. ೨೯೦.೦೦ ಲಕ್ಷಗಳು

ಇ) ವಯಸ್ಕರ ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಆಡಳಿತ ನಿರ್ವಹಣೆಗಾಗಿ ೧೯೮೮-೮೯, ೧೯೮೯-೯೦ನೇ ಸಾಲುಗಳಲ್ಲಿ ಮಿಕ್ಕ ಮಾಡಲಾಗಿರುವ ವಾರ್ಷಿಕ ಹೊತ್ತಗಳು ಕೆಳಕಂಡಂತಿವೆ.

೧೯೮೮-೮೯	ರೂ. ೧೭.೩೦ ಲಕ್ಷಗಳು
೧೯೮೯-೯೦	ರೂ. ೨೦.೬೦ ಲಕ್ಷಗಳು

ಈ) ಇಲ್ಲವೆ.

ಉ) ಉದ್ಭವಿಸುವುದಿಲ್ಲ.